ಶ್ರೀ ಎಚ್. ಜಿ. ಚನ್ನಪ್ಪ :—ಕಾಂಟ್ರಾಕ್ಟ್ ಕ್ಯಾರೇಜು ಬಸ್ಸುಗಳು ರಾಷ್ಟ್ರೀಕರಣ ಮಾಡಿರುವ ಬಸ್ಸುಗಳ ರೂಟಿನಲ್ಲೇ ಓಡುತ್ತಿರುವುದರಿಂದ ರಾಷ್ಟ್ರೀಕರಣ ಮಾಡಿರುವ ಉದ್ದೇಶ ಸಫಲವಾಗುತ್ತಿಲ್ಲ. ಹೆಸರಿಗೆ ಮಾತ್ರ ಕಾಂಟ್ರಾಕ್ಟ್ ಕ್ಯಾರೇಜು ಎಂದು ಓಡಿಸಿ ಸರಕಾರದ ಬಸ್ಸುಗಳಿಗೆ ನಷ್ಟ ಉಂಟು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

9-30 A.M.

ಶ್ರೀ ಕೆ. ಹೆಚ್. ರಂಗನಾಥ್ —ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಇಂದು ಕೆಲವರು ಕಾಂಟ್ರಾಕ್ಟ್ ಕ್ಯಾರೇಜ್ ಬಸಸ್ ಹೆಸರಿನಲ್ಲಿ ರೆಗ್ಯುಲರ್ ಆಗಿ ಸ್ಟೇಜ್ ಕ್ಯಾರೇಜ್ ಬಸಸ್ ತರಹ ನಡೆಸುತ್ತಿರುವುದರಿಂದ ನಮ್ಮ ರಾಷ್ಟ್ರೀಕರಣದ ಉದ್ದೇಶಕ್ಕೆ ಧಕ್ಕೆ ಬಂದಂತೆ ಆಗಿದೆ. ಇದನ್ನು ತಡೆಗಟ್ಟ ಬೇಕೆಂದು ವಿಚಾರ ಮಾಡುತ್ತಿದ್ದೇವೆ. ಹಿಂದೆ ಖಾಸಗೀಯವರು ಬಸ್‌ಗಳನ್ನು ಓಡಿಸುತ್ತಿದ್ದರು. ಅವರನ್ನು ತೆಗೆದು ನಾವು ರಾಷ್ಟ್ರೀಕರಣ ಮಾಡಿದೆವು. ಆದರೆ ಈಗ ಕೆಲವರು ಕಾನೂನನ್ನು ದುರುಪಯೋಗ ಮಾಡಿ ಕೊಂಡು ಕಾಂಟ್ರಾಕ್ಟ್ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಇದನ್ನು ತಡೆಗಟ್ಟಲು ಹಿಂದೆ ನಾನು ಈ ಸಭೆಗೆ ತಿಳಿಸಿದಂತೆ, ಇವರಿಗೆ ಲೈಸನ್ಸ್ ಕೊಡುವ ಅಧಿಕಾರವನ್ನು ಆರ್. ಟಿ. ಎ. ಅವರಿಂದ ತೆಗೆದುಕೊಂಡು ಎಸ್.ಟಿ.ಎ ಅವರಿಗೆ ಕೊಡಬೇಕು ಎಂದುಕೊಂಡು ಮೋಟಾರ್ ವೆಹಿಕಲ್ಸ್ ಆಕ್ಟ್‌ನ್ನು ತಿದ್ದುಪಡಿ ಮಾಡಿ ಅದನ್ನು ತಾಪ್ಪಾಧ್ಯಕ್ಷರ ಒಪ್ಪಿಗೆಗಾಗಿ ಕಳುಹಿಸಲಾಗಿವೆ. ಇದು ಒಂದು ಜಟಿಲ ಸಮಸ್ಯೆಯಾಗಿದೆ. ಇದನ್ನು ಪರಿಹಾರ ಮಾಡಬೇಕಾಗುತ್ತದೆ. ಇದನ್ನು ಜಾಗ್ರತೆ ಪರಿಹಾರ ಮಾಡಲು ಸರ್ಕಾರ ವಿಚಾರ ಮಾಡುತ್ತದೆ ಎನ್ನುವ ಮಾತನ್ನು ಮಾನ್ಯ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಬೆಂಗಳೂರು ಜಿಲ್ಲೆಯನ್ನು ರಾಷ್ಟ್ರೀಕರಣ ಮಾಡಿದ್ದರೂ ಮಾಗಡಿ ಪಾಕೆಟ್ಟನ್ನು ಕೈ ಬಿಡುವುದಕ್ಕೆ ಕಾರಣವೇನು ? ಇದರಿಂದ ಆ ಭಾಗದ ಜನರಿಗೆ ತೊಂದರೆ ಯಾಗಿದೆ. ಆದಕಾರಣ ಈ ಪಾಕೆಟ್ಟನ್ನು ಸಹ ಮುಂದಿನ ಸಾಲಿನಲ್ಲಿ ರಾಷ್ಟ್ರೀಕರಣ ಮಾಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಮಾಗಡಿ ಪಾಕೆಟ್ಟನ್ನು ಏತಕ್ಕೆ ಕೈಬಿಟ್ಟರು ಎಂಬುದು ನನಗೆ ಗೊತ್ತಿಲ್ಲ. ಆ ಕ್ಷೇತ್ರದ ಮಾನ್ಯ ಸದಸ್ಯರ ಒತ್ತಾಯಕ್ಕೆ ಒಳಗಾಗಿ ಕೈಬಿಟ್ಟರೆಂದು ಕಾಣುತ್ತದೆ. ಹೀನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಇದನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಸೇರಿಸಿಲ್ಲದಿರುವುದರಿಂದ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಹೀನೇ ಪಂಚವಾರ್ಷಿಕ ಯೋಜನೆಯಲ್ಲಿ ಉಳಿದ ಭಾಗ ಗಳನ್ನು ರಾಷ್ಟ್ರೀಕರಣ ಮಾಡುವುದಾಗಿ ತಿಳಿಸಿದರು. ಅದಕ್ಕೆ ಎಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೆಂಬುದನ್ನು ಹೇಳುತ್ತಾರೆಯೇ ? ಮತ್ತು ಇಲ್ಲಿ ಚಿತ್ರದುರ್ಗ ದಾವಣಗೆರೆ ಪಾಕೆಟ್‌ನಲ್ಲಿ ಹೀಗೆ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವ ಎರಡು ಯೋಜನೆಗಳನ್ನು ಪ್ರಕಟಣೆ ಮಾಡಿದ ಈ ಪ್ರಕಟಣೆಗೆ ವಿರೋಧವಾಗಿ ಬಂದಿರುವ ಆಕ್ಷೇಪಣೆಗಳು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ, ಇದು ಎಷ್ಟು ವರ್ಷಗ ಳಿಂದ ಪರಿಶೀಲನೆಯಲ್ಲಿದೆ ಎಂಬುದನ್ನು ಹೇಳುತ್ತಾರೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ಉಳಿದ ಭಾಗಗಳನ್ನು ರಾಷ್ಟ್ರೀಕರಣ ಮಾಡಲು ಹೀನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಒದಗಿಸಲಾಗಿದೆ ಎಂಬ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಚಿತ್ರದುರ್ಗ ದಾವಣಗೆರೆ ಪಾಕೆಟ್ ವಿಚಾರದಲ್ಲಿ ಮೊನ್ನೆ ತಾನೇ ಸ್ಕೀಮನ್ನು ಪ್ರಕಟ ಮಾಡಲಾಗಿದ್ದು ಆ ಬಗ್ಗೆ ಆಕ್ಷೇಪಣೆ ಗಳು ಬಂದಿವೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹಿಯರ್ ಮಾಡಬೇಕಾಗುತ್ತದೆ. ಅದು ಆದ ನಂತರ ಮುಂದಿನ ಕ್ರಮ ಕೈಕೊಳ್ಳಲಾಗುತ್ತದೆ.

BORE WELLS IN CHIKODI ASSEMBLY CONSTITUENCY

344. SRI P. P. HEGRE (Chikodi).—Will the Minister for Public Works and Electricity be pleased to state.—

(a) the names of villages and the number of bore wells dug in each village in Chikodi Assembly constituency under the head '64-Famine',

(*b*) of them, the number of successful and unsuccessful bore wells.

(*c*) the number of bore wells fitted with pumpsets (Electrical and Hand pumps) and the number of bore wells that have not been fitted with any pumpsets.

(*d*) whether all the remaining bore wells will be fitted with pumpsets and the time required for the same.

(*e*) whether any of the pump sets installed have gone out of order and since when; the reasons for not repairing them immediately.

(*f*) the probable time required to repair them.

(*g*) whether Government proposes to dig bore wells in those villages where there is no provision of drinking water ?

SRI H. M. CHANNABASAPPA (Minister for Public Works and Electricity).—

(*a*) Name of Village		Number of Bore Wells drilled
Chikodi Town		12
Kabbur		1
Kungtalli		1
Umrani		1
		15
(*b*) Successful	—	12
Unsuccessful	—	3
(*c*) Number of Bore wells fitted with		
(i) Electrical pumps	—	6
(ii) Hand pumps	—	7
		13

This includes the hand pump fixed to one unsuccessful well.

(*d*) Since the other two wells are unsuccessful the question of fitting any pump does not arise.

(*e*) Two pumps one in Chikodi and the other at Kabbur have gone out of order. The Town Municipal Council, Chikodi and Village Panchayat Committee, Kabbur have been requested to effect repairs to the pumpsets immediately,

(*f*) The Taluk Municipal Council, Chikodi and Village Panchayat Committee, Kabbur have been requested to expedite the repairs.

(*g*) Yes.

ಶ್ರೀ ಪಿ.ಪಿ, ಹೆಗರೆ,—ಇಲ್ಲಿ ಚಿಕ್ಕೋಡಿಯ ತಾಲ್ಲೂಕ್‌ಪುರಸಭೆ ಹಾಗೂ ಕಬ್ಬೂರಿನ ಗ್ರಾಮಪಂಚಾಯಿತಿ ಸಮಿತಿಯವರನ್ನು ದುರಸ್ತಿಯನ್ನು ತ್ವರಿತಗೊಳಿಸುವಂತೆ ಕೋರಲಾಗಿದೆ ಎಂದು ಹೇಳಿದ್ದೀರಿ. ಆದರೆ ಈ ಪಂಪ್‌ಸೆಟ್ಟುಗಳನ್ನು ಕಾಂಟ್ರಾಕ್ಟ್ ಬೇಸಿನಮೇಲೆ ಕೂಡಿಸಿರುವುದರಿಂದ ಒಂದು ವರ್ಷದೊಳಗೆ ಅವು ಏನಾದರು ಕೆಟ್ಟುಹೋದರೆ ಅದಕ್ಕೆ ನಾವು ಜವಾಬ್ದಾರರಲ್ಲ, ಅದನ್ನು ಪಬ್ಲಿಕ್ ಹೆಲ್ತ್ ಇಲಾಖೆಯವರು ಮಾಡಬೇಕು ಎಂದು ಹೇಳುತ್ತಿದ್ದಾರೆ, ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ಪಂಪ್‌ಸೆಟ್ಟುಗಳನ್ನು ಹಾಕಿದಮೇಲೆ ಅದನ್ನು ಪಂಚಾಯಿತಿಯವರ ಮತ್ತು ಮುನಿಸಿಪಾಲಿಟಿಯವರೆ ಸುಪರ್ದಿಗೆ ಕೊಡುತ್ತೇವೆ, ಮುಂದೆ ಅದನ್ನು ಮೇನ್‌ಟೇನ್ ಮಾಡಿಕೊಂಡು ಹೋಗಬೇಕಾಗುತ್ತದೆ. ಒಂದುವೇಳೆ ಅದು ಹೆಚ್ಚುಕಡಿಮೆಯಾದರೆ ಒಪ್ಪಂದದ ಪ್ರಕಾರ ಏನಿರುತ್ತದೆ, ಅದರ ಪ್ರಕಾರ ಕ್ರಮ ಕೈಕೊಳ್ಳುವುದು ಪಂಚಾಯತಿಯವರ ಮತ್ತು ಮುನಿಸಿಪಾಲಿಟಿಯವರ ಕರ್ತವ್ಯವಾಗಿರುತ್ತದೆ ಎಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಪಿ. ಪಿ, ಹೆಗರೆ.—ಇದು ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು, ತಮ್ಮ ಜವಾಬ್ದಾರಿ ಇಲ್ಲ ಎಂದು ಮುನಿಸಿಪಾಲಿಟಿಯವರು ಮತ್ತು ಪಂಚಾಯಿತಿಯವರು ಹೇಳುತ್ತಿದ್ದಾರೆ ?

Sri. H. M. CHANNABASAPPA.—I will examine who is responsible and to see what best can be done.

ಶ್ರೀ ಪಿ. ಪಿ. ಹೆಗರೆ.—ಕಬ್ಬೂರಿನಲ್ಲಿ ಈಗಾಗಲೇ ಬರಗಾಲ ಬಂದು ಕುಡಿಯುವುದಕ್ಕೆ ನೀರು ಇಲ್ಲದಂತಾಗಿದೆ. ಪಂಪ್‌ಸೆಟ್ಟು ಕೆಟ್ಟುಹೋಗಿರುವುದರಿಂದ ನಾಲ್ಕು ತಿಂಗಳಿಂದ ನೀರು ಇಲ್ಲ. ಇದುವರೆಗೆ ಯಾರು ಅದನ್ನು ವಿಚಾರ ಮಾಡಿಲ್ಲ, ಆದಕಾರಣ ಮಾನ್ಯ ಮಂತ್ರಿಗಳು ಪಬ್ಲಿಕ್ ಹೆಲ್ತ್ ಇಲಾಖೆಗೆ ಕೂಡಲೇ ತಿಳಿಸಿ ಅದನ್ನು ಸರಿಪಡಿಸುವುದಕ್ಕೆ ಹೇಳುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನನ್ನ ಒಂದು ಅನುಭವದಲ್ಲಿ ಸಾಮಾನ್ಯವಾಗಿ ಹಳ್ಳಿಗಾಡುಗಳಲ್ಲಿ ಈ ರೀತಿ ಏನಾದರೂ ಆದರೆ ಪಂಚಾಯಿತಿಯವರು ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಂಡು ಎಲ್ಲವನ್ನು ಸರ್ಕಾರದವರೇ ಮಾಡಬೇಕು ಎಂದು ಹೇಳುವ ಪದ್ಧತಿ ಇದೆ. ಆದರೆ ಈ ಸ್ಥಳಗಳಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದು ಗೊತ್ತಿಲ್ಲ, ಕೆಟ್ಟುಹೋದರೆ ಸರ್ಕಾರಕ್ಕೆ ಅರ್ಜಿ ಕೊಡುತ್ತಾರೆಯೇ ಹೊರತು, ಸ್ಥಳದ ಇಂಜಿನಿಯರ್ ಅವರನ್ನು ಕಂಡು ರಿಪೇರಿ ಮಾಡಿಸುವುದಿಲ್ಲ. ಅಗ್ರಿಮೆಂಟ್‌ನಲ್ಲಿ ಹೇಳಿರುವ ಪ್ರಕಾರ ಅವರಿಗೆ ಎನ್‌ಫೋರ್ಸ್ ಮಾಡಿ ರಿಪೇರಿ ಮಾಡಿಸಬೇಕೇ ಹೊರತು ಇಂತಹ ಸಣ್ಣ ವಿಷಯಗಳಿಗೆಲ್ಲಾ ಸರ್ಕಾರದವರೆಗೆ ಬರಬೇಕಾಗಿಲ್ಲ, ಆದರೂ ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದಕಾರಣ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇನೆ.

ಶ್ರೀ ಎಸ್. ಎ. ಪಾಟೀಲ್.—ಇಲ್ಲಿ ಮೊದಲನೆ ಪ್ರಶ್ನೆಗೆ ಉತ್ತರವಾಗಿ ಚಿಕ್ಕೋಡಿ ಟೌನ್‌ನಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ೧೨ ಎಂದು ಹೇಳಿದ್ದಿರಿ. ಇದರಲ್ಲಿ ಎಷ್ಟು ಯಶಸ್ವಿಯಾಗಿದೆ, ಎಷ್ಟು ಯಶಸ್ವಿಯಾಗಿಲ್ಲ ಎಂಬುದನ್ನು ಹೇಳುತ್ತಿರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದರಲ್ಲಿ ಯಶಸ್ವಿಯಾಗಿರತಕ್ಕದ್ದು ೧೨, ಯಶಸ್ವಿಯಾಗದೇ ಇರತಕ್ಕದ್ದು ೩.

ಶ್ರೀ ಎಂ.ಎಚ್. ಜಯಪ್ರಕಾಶನಾರಾಯಣ.—ಇದು ಬಡವರ ಪ್ರಶ್ನೆ. ಕುಡಿಯುವುದಕ್ಕೆ ನೀರು ಕೊಡುವುದು ಸರ್ಕಾರದ ಹೊಣೆ. ಈಗ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೆ ತೊಂದರೆಯಾಗಿದೆ. ಆದ್ದರಿಂದ ಅಲ್ಲಿ ಜಾಗ್ರತೆಯಾಗಿ ಕುಡಿಯುವ ನೀರನ್ನು ಸರಬರಾಜು ಮಾಡಿ ಅವರ ತೊಂದರೆಯನ್ನು ನಿವಾರಿಸುವ ಬಗ್ಗೆ ಅಭಯ ಕೊಡುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಇದರಲ್ಲಿ ಬಡವರು ಮತ್ತು ಭಾಗ್ಯವಂತರು ಎನ್ನುವ ಪ್ರಶ್ನೆಯೇ ಇಲ್ಲ. ಕುಡಿಯುವ ನೀರು ಇಬ್ಬರಿಗೂ ಅವಶ್ಯಕ. ಅದರ ಜವಾಬ್ದಾರಿ ಮುನಿಸಿಪಾಲಿಟಿ ಮತ್ತು ಪಂಚಾಯಿತಿಯವರಿಗೆ ಇದೆ. ಒಂದು ವೇಳೆ ಅದರಲ್ಲಿ ಎಡರುತೊಡರುಗಳು ಇದ್ದರೆ ಅದನ್ನು ಸರ್ಕಾರ ಪರೀಕ್ಷೆ ಮಾಡಿ ನಿಶ್ಚಯವಾಗಿ ಅನುಕೂಲ ಮಾಡಿಕೊಡುತ್ತದೆ.